ಸಾಕ್ಷಿ ಯನ್ನು ದಿಃ 11.11.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನಾನು 2 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.
2. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ ಜಮೀನು ಇಲ್ಲ ನನ್ನ ತಾಯಿ ಹೆಸರಿನಲ್ಲಿ 4 ಎಕರೆ ಇದೆ. ನನ್ನ ತಾಯಿಗೆ ಇಬ್ಬರು ಗಂಡು ಮಕ್ಕಳು.
3. ಆರೋಪಿ ಹಾಗೂ ನಾನು ಒಂದೇ ಊರಿನವರು.
4. ನಾನು ಆರೋಪಿಯ ಜಮೀನನ್ನು ಮಾಡಿಕೊಂಡಿದ್ದೆ ಎಂದರೆ 2014-15 ರಲ್ಲಿ ಮಾಡಿಕೊಂಡಿದ್ದೆ, 2015 ಕ್ಕೆ ಭೋಗ್ಯ ಮುಗಿದಿದೆ. 50 ಸಾವಿರಕ್ಕೆ ಭೋಗ್ಯ ಮಾಡಿಕೊಂಡಿದ್ದೆ, ಸದರಿ ಜಮೀನಿಗೆ ನನಗೆ ಹೋಗಲು ಆಗಿಲ್ಲ. ಅದನ್ನು ಬೇರೆಯವರಿಗೆ ತಂಬಾಕು ಬೆಳೆಯಲು 8 ಸಾವಿರಕ್ಕೆ ಕರ್ಣಕುಪ್ಪೆ ಶಿವಕುಮಾರ ರವರಿಗೆ ನೀಡಿದ್ದೆ. ನಾನು ಒಂದು ವರ್ಷ ಅವರಿಗೆ ನೀಡಿದ್ದೆ ನಂತರ ಪಾಳು ಬಿದ್ದಿತ್ತು.
5. ಆ ಸಮಯದಲ್ಲಿ ಆರೋಪಿಯಿಂದ ನಾನು ಭದ್ರತೆಗೆ ಚೆಕ್ ಪಡೆದಿದ್ದೆ ಎಂದರೆ ಸರಿಯಲ್ಲ, 3 ವರ್ಷಕ್ಕೆ ಲೀಸ್ ಗೆ ಎಂದು ಛಾಪಾ ಕಾಗದದ ಮೇಲೆ ಪತ್ರ ಬರೆಸಿಕೊಂಡಿದ್ದೆ. ಅದು ಯಾವ ಪತ್ರ ಎಂದು ನನಗೆ ಗೊತ್ತಿಲ್ಲ.
6. ಸದರಿ ಛಾಪಾ ಕಾಗದ ಅಸಲು ಪ್ರತಿ ನನ್ನ ಬಳಿ ಇದೆ. ಅದನ್ನು ಹಾಜರುಪಡಿಸುತ್ತೇನೆ.
7. ಸದರಿ ಪತ್ರದೊಂದಿಗೆ 50 ಸಾವಿರದ ಭದ್ರತೆಗಾಗಿ ಆರೋಪಿಯಿಂದ ನಿಪಿ - 1ರ ಚೆಕ್ಕನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ.
8. ಜಮೀನು ವ್ಯವಹಾರ ಬಿಟ್ಟು ನಿಮ್ಮ ಮಧ್ಯೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ, ಆರೋಪಿ ನನ್ನ ಬಳಿ 2 ಲಕ್ಷ ಹಣ ಕೇಳಿದ್ದ, 3 ತಿಂಗಳೊಳಗೆ ಕೊಡತ್ತೇನೆ ಎಂದು ತಿಳಿಸಿದ್ದ.
9. ಆರೋಪಿ ಗಾರೆ ಕೆಲಸ ಮಾಡುತ್ತಾರೆ ಎಂದರೆ, ಗಾರೆ ಕೆಲಸ ಹಾಗೂ ಜಮೀನು ಕೆಲಸ ಮಾಡುತ್ತಾರೆ. ನಿಮ್ಮ ಬ್ಯಾರನ್ ಮನೆ ಅವರೇ ಕಟ್ಟಿದ್ದಾರೆ ಎಂದರೆ, ಇಲ್ಲ ಬೇರೆಯವರು ವೆಂಕಟಯ್ಯ ನವರು ಕಟ್ಟಿರುತ್ತಾರೆ.
10. ಆರೋಪಿಯಿಂದ ಭದ್ರತೆಗೆ ಚೆಕ್ ಪಡೆದದ್ದಲ್ಲದೇ ಅವರಿಂದ ಬ್ಯಾರನ್ ಗಾರೆ ಕೆಲಸ ಮಾಡಿಸಿಕೊಂಡಿದ್ದೀರಾ ಎಂದರೆ ಸರಿಯಲ್ಲ.
11. ಬ್ಯಾರನ್ ಮನೆಯನ್ನು 2010-11 ರಲ್ಲಿ ಕಟ್ಟಿಸಿದ್ದೇನೆ. ಬ್ಯಾರನನ್ನು ಆರೋಪಿ 2016 ರಲ್ಲಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಬ್ಯಾರನ್ ಕಟ್ಟಿದ ಹಣವನ್ನು ಆರೋಪಿಗೆ ನೀಡದೇ ಸತಾಯಿಸಿದ್ದೀರಾ ಎಂದರೆ ಸರಿಯಲ್ಲ.

12. ಆರೋಪಿಯ ಜಮೀನು ನೀವು ಮಾಡಿಕೊಂಡ ನಂತರ 3 ವರ್ಷ ನಿಮಗೆ ತಂಟೆ ತಕರಾರು ಮಾಡಿಲ್ಲ ಎಂದರೆ ಸರಿ.
13. ಆರೋಪಿಯ ಜಮೀನನ್ನು ತಂಬಾಕು ಬೆಳೆಯಲು ಭೋಗ್ಯಕ್ಕೆ ಹಾಕಿಸಿಕೊಂಡು ಬೆಳೆ ಬೆಳೆದಿಲ್ಲ ಎಂದು ಅವರು ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ದುರುಪಯೋಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಾ ಎಂದರೆ ಸರಿಯಲ್ಲ.
14. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗೆ ಯಾವ ದಿನಾಂಕ ನೊಟೀಸು ನೀಡಿದ್ದೀರಿ ಎಂದರೆ, 19.03.2021 ರಲ್ಲಿ ಇರಬಹುದು.
15. ಸದರಿ ನೊಟೀಸಿಗೆ ಆರೋಪಿ ಪ್ರತ್ಯುತ್ತರ ನೊಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪ್ರತ್ಯುತ್ತರ ಪತ್ರದಲ್ಲಿ ಅವರ ಜಮೀನು ಭೋಗ್ಯ ನೀಡಿದ್ದು, ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿದ್ದಾಗಿ ತಿಳಿಸಿದ್ದಾರೆ ಎಂದರೆ ಸರಿಯಲ್ಲ.
16. ಸದರಿ ಪ್ರತ್ತುತ್ತರ ಪತ್ರ ನೀಡಿದ್ದರೂ ಸಹ ನೀವು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ, ಅವರು ನೀಡಿಲ್ಲ ಎಂದು ನುಡಿಯುತ್ತಾರೆ.
17. ಆರೋಪಿ ಯಾವ ದಿನಾಂಕದಂದು ನಿಮ್ಮ ಬಳಿ ಹಣ ಪಡೆದಿದ್ದರು ಎಂದರೆ, ಡಿಸೆಂಬರ್ 8 ಅಥವಾ 9 ರಲ್ಲಿ ಕೇಳಿದ್ದರು. ಇಸವಿ 2020 ಇರಬಹುದು. ಆ ಸಮಯದಲ್ಲಿ ಮಂಜ ಎಂಬ ಹುಡುಗ ಇದ್ದರು, ಅವರು ಈಗ ಮೃತರಾಗಿದ್ದಾರೆ.
18. ನಂತರ ನಿಮ್ಮ ಹಾಗೂ ಅವರ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ, ನಂತರ 2020 ರ ಡಿಸೆಂಬರ್ 12 ಅಥವಾ 13 ರಲ್ಲಿ ಪುನಃ ಬಂದು 3 ತಿಂಗಳ ನಂತರ ಕೊಡುತ್ತೇನೆ ಕೊಡು ಎಂದು ಹಿಂಸೆ ಮಾಡಿದ್ದಕ್ಕೆ ಹಣ ನೀಡಿದ್ದೆ ಎಂದು ನುಡಿಯುತ್ತಾರೆ. ಸದರಿ ಹಣ ನನ್ನ ಹುಣಸೂರಿನ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಇತ್ತು. ಅಲ್ಲಿಂದ ಡ್ರಾ ಮಾಡಿಸಿಕೊಂಡು ಬಂದು ಹಣ ಕೊಟ್ಟಿದ್ದೆ. ಯಾವ ದಿನಾಂಕ ಡ್ರಾ ಮಾಡಿದ್ದೆ ಎಂದು ನನಗೆ ನೆನಪಿಲ್ಲ.
19. ನೀವು ಆರೋಪಿಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ.
20. 2 ಲಕ್ಷ ಹಣ ನೀಡಲು ನಿಮಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ.
21. ದಿನಾಂಕ 9 ರಿಂದ 11 ರ ಒಳಗೆ ನಿಮ್ಮ ಖಾತೆಯಲ್ಲಿ 2 ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ.
22. ಈ ಕೇಸಿನ ವಿಚಾರವಾಗಿ ನಿಮ್ಮ ಹಾಗೂ ಆರೋಪಿ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.
23. ಆರೋಪಿ ಭದ್ರತೆಗಾಗಿ ನೀಡಿದ್ದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

24. ಭೋಗ್ಯದ ಹಣದ ಚೆಕ್ಕನ್ನು ನೀವು ವಾಪಸ್ ನೀಡದ ಸಂಬಂಧ ಆರೋಪಿ ಗ್ರಾಮದಲ್ಲಿ ಪಂಚಾಯತಿ ಮಾಡಿಸಿದ್ದರು ಎಂದರೆ ಸರಿಯಲ್ಲ. ಪಂಚಾಯತಿದಾರರು ಚೆಕ್ ವಾಪಸ್ ನೀಡುವಂತೆ ಹೇಳಿದರೂ ನೀವು ವಾಪಸ್ ನೀಡಿಲ್ಲ ಎಂದರೆ ಸರಿಯಲ್ಲ.
25. ಆರೋಪಿಯಿಂದ ಅನ್ಯಥಾ ಫಾಯಿದೆ ಹೊಂದಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ